ಮೇಲ್ವರ್ಗದ ಜನರನ್ನೂ, ಹೆಂಗಸರನ್ನೂ ಒಂದೇ ಸಲಕ್ಕೆ ಸೆಳೆದುಕೊಂಡು ಬಿಟ್ಟಿತಲ್ಲ ಅದು! ಕುಳಿತು ನೋಡುವ ಜಾಗದಲ್ಲಿ ತಾರತಮ್ಯವಿದ್ದರೂ. 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕಥೆಯಲ್ಲಿ ಈ ಕುರಿತ ಕೆಲವಂಶ ಹೇಳಿಕೊಂಡಿದ್ದೇನೆ.

## ಬರವಣಿಗೆಯ ಸೆಳೆತ

ಮೊದಮೊದಲು ನನಗೆ ಬರೆಯದೆ ಕಳೆಯದು ಎಂಬ ಉತ್ಸಾಹ. ಉತ್ಸಾಹ ಅದು. ಉತ್ಸಾಹ ಯಾಕೆಂದೆ ಅಂದರೆ ಭಾವನೆಗೆ ಸಂಬಂಧವೇ ಇಲ್ಲದೆ ಕೇವಲ ಕತೆಕಟ್ಟುವ ಉತ್ಸಾಹದ, ಭೇಷ್ ಎನಿಸಿಕೊಳ್ಳಬೇಕೆಂಬ, ನನ್ನ ಹೆಸರು ಪೇಪರಿನಲ್ಲಿ ಬರಬೇಕೆಂಬ ತೀವ್ರ ಹಂಬಲದಿಂದ ಬರೆಯುತ್ತಿದ್ದ ಹೈಸ್ಕೂಲಿನ ಆಸುಪಾಸಿನ ದಿನಗಳು ಅವು.

ನಮ್ಮ ಹೈಸ್ಕೂಲಿನಲ್ಲಿ ಆಗೆಲ್ಲ ಪ್ರತೀ ಕ್ಲಾಸು ವರ್ಷಕ್ಕೆ ಒಂದೊಂದು ಹಸ್ತಪತ್ರಿಕೆಯನ್ನು ಸಿದ್ಧಮಾಡುತಿತ್ತು. ಅದಕ್ಕೆ ಬೇಕಾಗುವುದು ಸಣ್ಣ ಸಣ್ಣ ಬರಹಗಳು. ದೊಡ್ಡದು ಬರೆದರೆ ಉಳಿದವರಿಗೆ ಜಾಗ ಬೇಕಲ್ಲ? ಸಣ್ಣ ಬರಹ ಹಾಗೆ ನನ್ನಲ್ಲಿ ಸುರುವಾದದ್ದು ಬಹುಶಃ ಕಾಯಂ ಉಳಿದು ಬಿಟ್ಟಿತು. ತ್ರಿವೇಣಿ ಕಾದಂಬರಿಗಳನ್ನೆಲ್ಲ ನಾವು ಕಸಿಕಸಿದು ಓದುತ್ತಿದ್ದ ಕಾಲವದು. ಓದುತ್ತ ಅದನ್ನೇ ಹೋಲುವ ಒಂದು ಕಿರು ಕಾದಂಬರಿ(ಅಂತ ಅಂದು ನಾನಂದುಕೊಂಡಿದ್ದು)ಯನ್ನೂ ತ್ರಿವೇಣಿಯವರದೇ ಕನ್ನಡದಲ್ಲಿ ಬರೆದಿದ್ದೆ; 'ಸಾಹಿತ್ಯ ಜ್ಯೋತಿ' ಎಂಬ ನಮ್ಮ ಮನೆಯೊಳಗಿನ ಹಸ್ತಪತ್ರಿಕೆಗೆ.

ನಂತರ 'ಸುಧಾ' ಪತ್ರಿಕೆ ಹುಟ್ಟಿಕೊಂಡ ಕಾಲದಲ್ಲಿ ಅದರ ಸಂಪಾದಕರಾದ ಇ.ಆರ್. ಸೇತೂರಾಂ ಹಾಗೂ ಮುಂದೆ ಎಂ.ಬಿ. ಸಿಂಗ್ ಅವರಿಂದ 'ಒಂದು ಕಥೆ ಕಳಿಸಿ' ಎಂದು ಬರುವ ಪತ್ರಗಳೂ ಕಥೆ ಬರೆವ ಆಸಕ್ತಿಗೆ ಪೂರಕವಾದುವು. ಬರೆದದ್ದು ಪತ್ರಿಕೆಗೆ ಕಳಿಸಿದ ಮೇಲೆ ಅದು ಹಿಂದೆ ಬಂದರೆ ಎಂಬ ಆತಂಕ. ಎಷ್ಟೋ ಸಲ ಪೋಸ್ಟ್‌ಮ್ಯಾನ್ ಬರುವುದನ್ನೇ ಕಾಯುತ್ತ ಬರಹ ಹಿಂದೆ ಬಂದರೆ ಎಲ್ಲ ಕಾಣುವ ಮುಂಚೆಯೇ ಅಡಗಿಸಿಡುವ, ಪತ್ರಿಕೆಯಿಂದ ಪ್ರಕಟಿಸುತ್ತೇವೆ ಎಂಬ ಪತ್ರವನ್ನು ಮಾತ್ರ ಎಲ್ಲರ ಕಣ್ಣಿಗೆ ಬೀಳುವಂತೆ ಇಡುತ್ತಿದ್ದ ನೂರಾರು ತಳಮಳಗಳು. ಹೀಗೆ ನಾನು, ಬರೆಯುತ್ತ ಬೆಳೆದವಳು ಹೊರತು ವಯಸ್ಸಿನ ಒಂದು ಹಂತಕ್ಕೆ ಬಂದ ಮೇಲೆ (ಅರ್ಥಾತ್ ಬೆಳೆದ ಮೇಲೆ) ಬರೆಯ ತೊಡಗಿದವಳಲ್ಲ. ವೈಯಕ್ತಿಕವಾಗಿಯೂ ನನಗೆ ಕಥಾ ರಚನೆ ಹೆಚ್ಚು ಆಕರ್ಷಕವೆನಿಸಿತು. ವಿಸ್ತಾರಕ್ಕಿಂತ ಅದರ ಸಾಂದ್ರತೆಯೇ ನನ್ನನ್ನು ಹೆಚ್ಚು ಹಿಡಿದಿಟ್ಟಿತು. ಇನ್ನು, ಸಣ್ಣ ಕತೆಯ ಅನುಕೂಲವೆಂದರೆ ಬೇಗ ಮುಗಿಯುತ್ತದೆ ಎಂಬುದೂ. ಆದರೆ ಬೇಗ ಮುಗಿಯುವುದು ಕಥೆಯೊಂದು ನೂಲೆಳೆಯಂತೆ ಮುಂದರಿದಾಗ ಮಾತ್ರ. ಒಮ್ಮೊಮ್ಮೆ ಬರೆದದ್ದು ಸಮಾಧಾನ ತಾರದೆ, ಹೇಳಹೊರಟದ್ದು ಇದಲ್ಲ ಇದಲ್ಲ ಅನಿಸುತ್ತ ಪುಟಗಟ್ಟಲೆ ಬರೆದು ಕಾದಂಬರಿಯಷ್ಟು ದೀರ್ಘದಾರಿ ಸವೆದು ಅಂತಿಮವಾಗಿ ಅದು ಒಂದು ಸಣ್ಣ ಕತೆಯಾಗಿ ಸಾಂದ್ರಗೊಳ್ಳುವುದಿದೆ.

ಇವತ್ತು ಕಥೆಗಳು ಕೇವಲ ಮನೆಯೊಳಗಿನ ಕಥೆಗಳಾಗಿ ಉಳಿಯಲು ಸಾಧ್ಯವಿಲ್ಲ. ಜಗತ್ತು ಬೆಳೆದಂತೆ ಸಮಸ್ಯೆಗಳೂ ಬೆಳೆಯುತ್ತವೆ. ಜೊತೆಗೇ ಬರಹಗಾರರ ತುಮುಲಗಳೂ ಸವಾಲುಗಳೂ...

ಬರೆಯುವುದೆಂದರೇನು ಕಡೆಗೂ? ಮನಸ್ಸುಗಳೊಂದಿಗೆ ನಡೆಸುವ ಸಂವಾದವಷ್ಟೆ? ಅದು ಬರಹಗಾರರು ಸ್ವತಃ ತಮ್ಮೊಂದಿಗೆ ನಡೆಸುವ ಸಂವಾದವೂ ಸ್ವಗತವೂ.